**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಕೊಡಗು – ಮಡಿಕೇರಿ**

**ಸೆಷನ್ ಕೇಸು ಸಂಖ್ಯೆ: 78/2023**

**ಫಿರ್ಯಾದುದಾರರು:** ರಾಜ್ಯ ಸರ್ಕಾರದ ಪರವಾಗಿ,
ಶನಿವಾರಸಂತೆ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರು:** **ಆ–1 ಸಣ್ಣಪ್ಪ ಯಾನೆ ಡಿಲಾಕ್ಷ**
ತಂದೆ: ನಾಗಯ್ಯ
ಪ್ರಾಯ 44 ವರ್ಷ,
ಕೂಲಿ ಕೆಲಸ,
ವಾಸ: ಕಣಗಾಲು ಗ್ರಾಮ,
ನಾಕಲಗೂಡು ಅಂಚೆ,
ಕೊಡಗು ಜಿಲ್ಲೆ.

**ಆ–2 ಲಕ್ಷ್ಮಿ**
ಗಂಡ: ಸಣ್ಣಪ್ಪ
ಪ್ರಾಯ 37 ವರ್ಷ,
ಕೂಲಿ ಕೆಲಸ,
ವಾಸ: ಕಣಗಾಲು ಗ್ರಾಮ,
ನಾಕಲಗೂಡು ಅಂಚೆ,
ಕೊಡಗು ಜಿಲ್ಲೆ.
**ಆ–3** ನಾಗಯ್ಯ
ತಂದೆ: ರಂಗಯ್ಯ

ಪ್ರಾಯ 73 ವರ್ಷ,
ಕೂಲಿ ಕೆಲಸ,
ವಾಸಃ ಕಣಗಾಲು ಗ್ರಾಮ,
ನಾಕಲಗೂಡು ಅಂಚೆ,
ಕೊಡಗು ಜಿಲ್ಲೆ.

**ಆ–4** ಕಮಲಮ್ಮ
ಗಂಡಃ ನಾಗಯ್ಯ
ಪ್ರಾಯ 70 ವರ್ಷ,
ಗೃಹಿಣಿ
ವಾಸಃ ಕಣಗಾಲು ಗ್ರಾಮ,
ನಾಕಲಗೂಡು ಅಂಚೆ,
ಕೊಡಗು ಜಿಲ್ಲೆ.

**ಆ–5** ಬಸವರಾಜಪ್ಪ
ತಂದೆಃ ದಿಃ ಮರಿಯಪ್ಪ,
ಪ್ರಾಯ 46 ವರ್ಷ,
ಕೂಲಿ ಕೆಲಸ,
ವಾಸಃ ನಾಕಲಗೂಡು ಗ್ರಾಮ,
ಕೊಡಗು ಜಿಲ್ಲೆ.

**ಆ–6** ಧನುಂಜಯ್ಯ ಎಂ.ಕೆ. ಯಾನೆ ಶಂಶಾಕ್
ತಂದೆಃ ಕುಮಾರ್
ಪ್ರಾಯ 26 ವರ್ಷ,
ವ್ಯವಸಾಯ,
ವಾಸಃ ನಾಕಲಗೂಡು ಗ್ರಾಮ,

ಕೊಡಗು ಜಿಲ್ಲೆ.

**ಆ–7** ಚಿದಾನಂದ ಎನ್.ಆರ್
ತಂದೆಃ ರಾಜಶೇಖರಯ್ಯ,
ಪ್ರಾಯ 39 ವರ್ಷ,
ವ್ಯವಸಾಯ,
ವಾಸಃ ನಾಕಲಗೂಡು ಗ್ರಾಮ,
ಕೊಡಗು ಜಿಲ್ಲೆ.

## ದಂಡ ಪ್ರಕಿಯಾ ಸಂಹಿತೆ ಕಲಂ 313 ರಡಿಯಲ್ಲಿ

## ಆರೋಪಿ ಹೇಳಿಕೆ

**ಪ್ರಃ1** –ಅಭಿಯೋಜನೆಯ ಪರ ಸಾಕ್ಷಿದಾರರು ನ್ಯಾಯಾಲಯದಲ್ಲಿ ನುಡಿದ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?
ಉಃ ಕೇಳಿಸಿಕೊಂಡಿದ್ದೇನೆ.

**ಪ್ರಃ 2** – ಫ್ರಾಸಾ–1 ರವಿ ರವರು ತನ್ನ ಸಾಕ್ಷ್ಯದಲ್ಲಿ ಚಾಸಾ–1 ರಿಂದ ಚಾಸಾ–3 ನಾಕಲಗೂಡಿನಲ್ಲಿ 15 ಸೆಂಟ್ಸ್ ಜಾಗದಲ್ಲಿ ಒಂದು ಶೆಡ್ ಹಾಕಿಕೊಂಡು ವಾಸವಾಗಿದ್ದು, ಚಾಸಾ–2 ಸದರಿ ಜಾಗವನ್ನು ಮಂಜೂರು ಮಾಡಿಕೊಡಬೇಕು ಎಂದು 2018ನೇ ಇಸವಿಯಲ್ಲಿ ತಾಲ್ಲೂಕು ಕಛೇರಿಗೆ ಅರ್ಜಿ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 3** – ಫ್ರಾಸಾ–1 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 18–07–2022 ರಂದು ತಾನು ಗಾರೆ ಕೆಲಸಕ್ಕಾಗಿ ನಾಕಲಗೂಡು ಕಡೆಗೆ ಬೈಕಿನಲ್ಲಿ ಬೆಳಿಗ್ಗೆ 7.30 ಗಂಟೆ ಸಮಯಕ್ಕೆ ಹೋಗುತ್ತಿದ್ದೆ. ಚಾಸಾ–2 ರವರ ಮನೆಯ ಬಳಿ ಗಲಾಟೆ ಆಗುತಿತ್ತು. ತಾನು ಬೈಕ್ ನಿಲ್ಲಿಸಿ ಅಲ್ಲಿಗೆ ಹೋದೆ. ಆಗ ಚಾಸಾ–5 ರವರು

ಸಹ ಅಲ್ಲಿಗೆ ಬಂದರು. ಅಲ್ಲಿ ಆರೋಪಿತರು ಮತ್ತು ಚಾಸಾ–1 ಹಾಗೂ ಚಾಸಾ–2 ಇದ್ದರು. ಲಕ್ಷ್ಮಿ ಎಂಬುವವರು ಚಾಸಾ–1 ರವರ ಕುತ್ತಿಗೆಗೆ ಕಾಲಿನಿಂದ ತುಳಿಯುತ್ತಿದ್ದರು. 2ನೇ ಆರೋಪಿ ದೊಣ್ಣೆಯಿಂದ ಚಾಸಾ–1 ರವರ ತಲೆಗೆ ಹೊಡೆದು, ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದ. 1ನೇ ಆರೋಪಿ ಚಾಸಾ–2 ರವರ ಬಳಿಗೆ ಹೋಗಿ ಅವರ ಶರ್ಟ್‌ಜೇಬಿಗೆ ಕೈ ಹಾಕಿ ಏನೋ ತೆಗೆದುಕೊಂಡು ಹೋದರು. ಆ ಬಳಿಕ ಚಾಸಾ–2 ರವರನ್ನು ವಿಚಾರಣೆ ಮಾಡಲು ಅವರು ಮನೆ ಕೆಲಸಕ್ಕೆಂದು ಇಟ್ಟಿದ್ದ 25,000/– ರೂಪಾಯಿಗಳನ್ನು 1ನೇ ಆರೋಪಿ ಕಿತ್ತುಕೊಂಡು ಹೋದ ಎಂದು ಹೇಳಿದರು. ಮುಂದುವರೆದು ಇದನ್ನು ಯಾರಿಗಾದರು ಹೇಳಿದರೆ ಕೊಲೆ ಮಾಡುತ್ತೇನೆ ಎಂದು ಹೇಳಿದ್ದರು. ಆ ಬಳಿಕ ಆರೋಪಿಗಳು ಅಲ್ಲಿಂದ ಓಡಿ ಹೋದರು. ಚಾಸಾ–1 ಆ ಬಳಿಕ ದೂರು ನೀಡಿದ್ದರು. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ್ದ ಮು.ಮಾ–1 ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ತನ್ನಿಂದ ಹೇಳಿಕೆ ಪಡೆದುಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ: 4** – ಪ್ರಾಸಾ–2 ರವಿ ಎನ್.ವಿ. ರವರು ತನ್ನ ಸಾಕ್ಷ್ಯದಲ್ಲಿ ತನಗೆ ಚಾಸಾ–1 ರವರ ಪರಿಚಯ ಇದೆ. ದಿನಾಂಕ 23–07–2022 ರಂದು ನಿಪಿ–1 ರಂತೆ ಮಹಜರ್ ಹಾಗೂ ನಿಪಿ–2 ರಂತೆ ನಕಾಶೆಯನ್ನು ತಯಾರಿಸಿರುತ್ತಾರೆ. ನಿಪಿ–1(ಎ) ಹಾಗೂ ನಿಪಿ–2(ಎ) ತನ್ನ ಸಹಿಗಳು ಆಗಿರುತ್ತವೆ ಎಂದು ಮತ್ತು ಎರಡು ಮೂರು ವರ್ಷಗಳ ಹಿಂದೆ ತಾನು ನಾಕಲಗೂಡಿನಲ್ಲಿ ತೋಟದಿಂದ ತಮ್ಮ ಮನೆಗೆ ಬರುತಿದ್ದಾಗ ಶನಿವಾರಸಂತೆ ಪೊಲೀಸರು ಚಾಸಾ–1 ರವರ ಮನೆಯ ಮುಂದೆ ಬಂದಿದ್ದರು. ನಿಪಿ–3 ರ ಎರಡು ಫೋಟೊಗಳಲ್ಲಿ ತಾನು ಕಾಣುತಿದ್ದೇನೆ ಎಂದು ಹಾಗೂ ದಿನಾಂಕ 13–08–2022 ರಂದು ತಯಾರಿಸಿದ ನಿಪಿ–4 ಮಹಜರ ನಲ್ಲಿ ತನ್ನ ಸಹಿ ಇರುತ್ತದೆ. ನಿಪಿ–4(ಎ) ತನ್ನ ಸಹಿ ಆಗಿರುತ್ತದೆ. ನಿಪಿ–5 ರಲ್ಲಿ ಕಾಣುವ 4 ಫೋಟೊಗಳಲ್ಲಿ ತಾನು ಕಾಣುತಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ: 5** – ಪ್ರಾಸಾ–3 ನಟರಾಜ್ ರವರು ತನ್ನ ಸಾಕ್ಷ್ಯದಲ್ಲಿ ಚಾಸಾ–1 ಹಾಗೂ ಪ್ರಾಸಾ–2 ರವರ ಪರಿಚಯ ಇದೆ. ನಿಪಿ–1 ಹಾಗೂ ನಿಪಿ–2 ರ ದಾಖಲೆಗಳಲ್ಲಿ ಇರುವ ನಿಪಿ–1(ಬಿ) ಹಾಗೂ ನಿಪಿ–2(ಬಿ) ತನ್ನ ಸಹಿಗಳು ಆಗಿರುತ್ತವೆ ಎಂದು ಮತ್ತು ಸದರಿ ದಾಖಲೆಗಳಿಗೆ ತಾನು ಕಳೆದ ಒಂದು ವರ್ಷದ ಮೊದಲು

ನಾಕಲಗೂಡಿನಲ್ಲಿ ಚಾಸಾ–3 ರವರ ಮನೆಯ ಎದುರು ಪೊಲೀಸರು ಬಂದಿದ್ದಾಗ ಸಹಿ ಹಾಕಿದ್ದೇನೆ. ನಿಪಿ–3 ರ ಫೋಟೋದಲ್ಲಿ ತಾನು ಕಾಣುತಿದ್ದೇನೆ ಅದನ್ನು ಪೊಲೀಸರು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 6** – ಫ್ರಾಸಾ–4 ಮಂಜುನಾಥ ರವರು ತನ್ನ ಸಾಕ್ಷ್ಯದಲ್ಲಿ ಆರೋಪಿಗಳ ಪರಿಚಯ ಇದೆ. ಚಾಸಾ–1 ತನ್ನ ಹೆಂಡತಿ ಆಕೆ ಮೃತಪಟ್ಟಿದ್ದಾಳೆ. ನಾಕಲಗೂಡು ಗ್ರಾಮದ ಸರ್ವೆ ನಂಬರ್ 38/1 ರಲ್ಲಿ 15 ಸೆಂಟ್ಸ್ ಜಾಗಕ್ಕೆ ತಾನು ಬೇಲಿ ಹಾಕಿಕೊಂಡಿದ್ದೇನೆ. ಸದರಿ ಜಾಗವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಚಾಸಾ–3 ಅರ್ಜಿ ಹಾಕಿದ್ದರು. ಸದರಿ ಜಾಗದಲ್ಲಿ ತಾನು ಒಂದು ಶೀಟಿನ ಮನೆಯನ್ನು ನಿರ್ಮಿಸಿದ್ದೆ ಅಲ್ಲಿ ತಾನೇ ವಾಸಮಾಡಿಕೊಂಡಿದ್ದೆ. ಚಾಸಾ–3 ಮನೆ ಕಟ್ಟಲು ಹಣಕಾಸು ನೀಡಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 7**– ಫ್ರಾಸಾ–4 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸುಮಾರು ಮೂರು ವರ್ಷದ ಮೊದಲು ಚಾಸಾ–1 ರವರಿಗೆ ಆರೋಗ್ಯ ಚೆನ್ನಾಗಿ ಇಲ್ಲದ ಕಾರಣ ತಾನು ಹಾಗೂ ತನ್ನ ಹೆಂಡತಿ ಶನಿವಾರಸಂತೆಯ ಹೋಟೆಲ್ ಗೆ ಹೋದೆವು. ಬೆಳಿಗ್ಗೆ 7.30 ಗಂಟೆಗೆ ತಾವು ವಾಪಸ್ಸಾದಾಗ ಆರೋಪಿಗಳು ಮನೆಯ ಒಳಗಡೆ ಇದ್ದು, ಬೆಂಕಿ ಉರಿಸಿ ಅಡುಗೆ ಮಾಡುತಿದ್ದರು. ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ಅದು ತಮ್ಮ ಮನೆ ಎಂದು ಹೇಳಿ ಜೋರು ಮಾಡಿದ್ದರು. 5ನೇ ಆರೋಪಿ ಬಸವರಾಜು, 6ನೇ ಆರೋಪಿ ಶಶಾಂಕ್ ಬಂದು ಸದರಿ ಮನೆ ತಮ್ಮದ್ದು ಎಂದು ತಮಗೆ ಜೋರು ಮಾಡಿದರು. 2ನೇ ಆರೋಪಿ ಲಕ್ಷ್ಮಿ ದೊಣ್ಣೆಯಿಂದ ಚಾಸಾ–1 ರವರಿಗೆ ಹಲ್ಲೆ ಮಾಡಿ, ಕುತ್ತಿಗೆಯನ್ನು ಹಿಸುಕಿದ್ದರು. ಉಳಿದ ಆರೋಪಿಗಳು ವೇದಾವತಿಯರ ಕುತ್ತಿಗೆ ಹಿಸುಕಿ ಗಾಯ ಮಾಡಿದ್ದರು. ಆ ಬಳಿಕ 1ನೇ ಆರೋಪಿ ಆರೋಪಿ ಸಣ್ಣಪ್ಪ ತನ್ನ ಕಿಸೆಯಲ್ಲಿ ಇದ್ದ 25,000/– ರೂಪಾಯಿ ಹಣವನ್ನು ಕಿತ್ತುಕೊಂಡು ಹೋದ. ತಾನು ಜೋರು ಮಾಡಿದರೆ ಆರೋಪಿಗಳು ಕೊಲೆ ಮಾಡುತ್ತೇವೆ ಎಂದು ಹೆದರಿಸಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ 8** – ಪ್ರಾಸಾ–4 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಆ ಬಳಿಕ ಅಲ್ಲಿಗೆ ಪ್ರಾಸಾ–1 ಹಾಗೂ ಚಾಸಾ–5 ಬಂದು ಜಗಳ ಬಿಡಿಸಿ ಸಮಾಧಾನ ಮಾಡಿದ್ದರು. ಚಾಸಾ–1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಆ ಬಳಿಕ ಚಾಸಾ–1 ಶನಿವಾರಸಂತೆ ಠಾಣೆಗೆ ಹೋಗಿ ದೂರು ನೀಡಿದ್ದರು. ಕಂದಾಯ ಇಲಾಖೆಯವರು ಅಲ್ಲಿಗೆ ಬಂದು ಮನೆಗೆ ಬೀಗ ಹಾಕಿದರು. ಪೊಲೀಸರು ಬಂದು ಸ್ಥಳವನ್ನು ನೋಡಿ 1ನೇ ಆರೋಪಿಯನ್ನು ಅಲ್ಲಿಗೆ ಕರೆದುಕೊಂಡು ಬಂದು 1ನೇ ಆರೋಪಿ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ನಿಪಿ.2ರಂತೆ ಮಹಜರ್ ತಯಾರಿಸಿ ಸದರಿ ಮಹಜರಿನಡಿಯಲ್ಲಿ ಮು.ಮಾ–1 ದೊಣ್ಣೆ ಹಾಗೂ ಮು.ಮಾ–2 ಹಣವನ್ನು 1ನೇ ಆರೋಪಿ ಸಣ್ಣಪ್ಪ ರವರಿಂದ ತನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು .

**ಪ್ರಃ 9** – ಪ್ರಾಸಾ–4 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ 1, 5, 6 ಮತ್ತು 7ನೇ ಆರೋಪಿಗಳು ನ್ಯಾಯಾಲಯದ ಎದುರು ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿರುತ್ತದೆ. ನ್ಯಾಯಾಲಯದಲ್ಲಿ ಹಾಜರಿದ್ದ 2 ರಿಂದ 4ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–2 ಮತ್ತು ನಿಪಿ–4 ದಾಖಲೆಯಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಚಾಸಾ–1 ರವರಿಗೆ ಸೇರಿದ್ದು. ಆರೋಪಿಗಳು ತಮ್ಮ ಮನೆಗೆ ಪ್ರವೇಶ ಮಾಡಿ, ಅದನ್ನು ವಿಚಾರಿಸಿದಾಗ ತಮಗೆ ಹಲ್ಲೆ ಮಾಡಿ, ಕುತ್ತಿಗೆ ಹಿಸುಕಿದ್ದಾರೆ ಎಂದು ಸದರಿ ಪುಕಾರಿನಲ್ಲಿ ಬರೆಯಲಾಗಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ –10** ಪ್ರಾಸಾ–5 ಲೋಕೇಶ್ ರವರು ತನ್ನ ಸಾಕ್ಷ್ಯದಲ್ಲಿ ಆರೋಪಿಗಳ ಪರಿಚಯ ಇದೆ. ಚಾಸಾ–1 ತನ್ನ ತಾಯಿ. ಪ್ರಾಸಾ–4 ತನ್ನ ತಂದೆ. ನಾಕಲಗೂಡು ಗ್ರಾಮದ ಸರ್ವೆ ನಂಬರ್ 38/1 ರಲ್ಲಿ 15 ಸೆಂಟ್ಸ್ ಜಾಗಕ್ಕೆ ತಾವು ಬೇಲಿ ಹಾಕಿ ಅದನ್ನು ಮಂಜೂರು ಮಾಡಲು ಕಂದಾಯ ಇಲಾಖೆಗೆ ಫಾರಂ ನಂಬರ್ 57 ರಲ್ಲಿ ಅರ್ಜಿ ಹಾಕಿಕೊಂಡಿರುತ್ತೇವೆ ಮತ್ತು ಅದರಲ್ಲಿ ತನ್ನ ತಂದೆ–ತಾಯಿ ಮನೆ ಕಟ್ಟಿದ್ದಾರೆ. ಮನೆ ಕಟ್ಟಲು ತಾನೇ ತನ್ನ ತಂದೆಗೆ 25,000/– ರೂಪಾಯಿಗಳನ್ನು ನೀಡಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ: -11** ಪ್ರಾಸಾ-5 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 18-07-2022 ರಂದು ತನ್ನ ತಂದೆ ತಾಯಿ ತನ್ನ ಚಿಕ್ಕಪ್ಪನ ಮನೆಗೆ ಹೋಗಿದ್ದು, ಅವರು ಬರುವ ಮೊದಲು ಆರೋಪಿಗಳು ಸದರಿ ಮನೆಯ ಒಳಗೆ ಸೇರಿಕೊಂಡು, ತನ್ನ ತಂದೆ ತಾಯಿ ಅದನ್ನು ಕೇಳಲು ಹೋದಾಗ 2ನೇ ಆರೋಪಿ ಲಕ್ಷ್ಮಿ ತನ್ನ ತಾಯಿಯ ಕುತ್ತಿಗೆಯನ್ನು ಹಿಸುಕಿ ಕೆಳಗಡೆ ಹಾಕಿದ್ದರು. 5ನೇ ಆರೋಪಿ ಬಸವರಾಜು ಅಲ್ಲಿಗೆ ಬಂದು ಕೊಲೆ ಬೆದರಿಕೆ ಹಾಕಿ, ತನ್ನ ತಂದೆಯ ಕಿಸೆಯಲ್ಲಿ ಇದ್ದ 25,000/- ರೂಪಾಯಿಗಳನ್ನು ಕಸಿದುಕೊಂಡು ಹೋದರು. ಪ್ರಾಸಾ-4 ರವರೇ ತನಗೆ ಈ ವಿಚಾರವನ್ನು ತಿಳಿಸಿದ್ದು, ಆ ಬಳಿಕ ತನ್ನ ತಂದೆ-ತಾಯಿ ಪೊಲೀಸರು ಪುಕಾರು ಸಲ್ಲಿಸಿದ್ದರು. ಆ ಬಳಿಕ ಪೊಲೀಸ್ ಇಲಾಖೆಯವರು ಸದರಿ ಜಾಗ ಸರ್ಕಾರಿ ಜಾಗ ಆದ ಕಾರಣ ಅದು ತೀರ್ಮಾನವಾಗುವವರೆಗೆ ಹಾಗೆಯೇ ಇರಲಿ ಎಂದು ಹೇಳಿದ್ದು, ಕಂದಾಯ ಇಲಾಖೆಯವರು ಮನೆಗೆ ಬೀಗ ಹಾಕಿ, ಸೀಲು ಮಾಡಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ: 12 –** ಪ್ರಾಸಾ-6 ಅಶ್ವಿತ ರವರು ತನ್ನ ಸಾಕ್ಷ್ಯದಲ್ಲಿ ತಮ್ಮ ಮನೆಯ ಪಕ್ಕದ ಪೈಸಾರಿ ಜಾಗದಲ್ಲಿ 8 ವರ್ಷಗಳ ಮೊದಲೇ ಬೇಲಿ ಹಾಕಿಕೊಂಡು ಸ್ವಾಧೀನದಲ್ಲಿ ಇದ್ದು, ಇತ್ತೀಚೆಗೆ ಅದರಲ್ಲಿ ಶೀಟಿನ ಮನೆಯನ್ನು ನಿರ್ಮಿಸಿದ್ದರು. ಪ್ರಾಸಾ-5 ಸದರಿ ಮನೆಯಲ್ಲಿ ಚಾಸಾ-1 ಹಾಗೂ ಪ್ರಾಸಾ-4 ರವರನ್ನು ವಾಸಿಸಲು ಬಿಟ್ಟಿದ್ದು, ದಿನಾಂಕ 18-07-2022 ರಂದು ಬೆಳಿಗ್ಗೆ 7.30 ಗಂಟೆಗೆ ತಾನು ತನ್ನ ಮನೆಯಲ್ಲಿ ಇದ್ದಾಗ ಪಕ್ಕದ ಪ್ರಾಸಾ-5 ರವರ ಮನೆಯಲ್ಲಿ ಕೂಗಾಡುವ ಶಬ್ದ ಕೇಳಿ ತಾನು ಅಲ್ಲಿಗೆ ಹೋದಾಗ ಆರೋಪಿಗಳು ಪ್ರಾಸಾ-4 ರವರ ಮನೆಯ ಒಳಗಡೆ ಇದ್ದು, ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆದು ಅವರ ಕುತ್ತಿಗೆಯನ್ನು ಹಿಡಿದು ಹಿಸುಕಿದ್ದರು. ಆ ಬಳಿಕ 1ನೇ ಆರೋಪಿ ಪ್ರಾಸಾ-4 ರವರ ಕಿಸೆಯಿಂದ ಏನನ್ನೋ ತೆಗೆದುಕೊಂಡು ಹೋದರು. ತಾನು ಪ್ರಾಸಾ-4 ರವರನ್ನು ವಿಚಾರಿಸಿದಾಗ ಆತ 1ನೇ ಆರೋಪಿ ತನ್ನ ಕಿಸೆಯಲ್ಲಿ ಇದ್ದ 25,000/- ರೂಪಾಯಿಗಳನ್ನು ಕಸಿದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ: 13–**ಪ್ರಾಸಾ-6 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಗಳು ಚಾಸಾ-1 ಹಾಗೂ ಪ್ರಾಸಾ-4 ರವರಿಗೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು. ಚಾಸಾ-1 ಮಾರನೇ ದಿನ ಪೊಲೀಸ್ ದೂರು

ನೀಡಿದ್ದು ಸದರಿ ಬಗ್ಗೆ ಪ್ರಕರಣ ದಾಖಲಾಗಿದೆ. ಆರೋಪಿ ಚಾಸಾ–1 ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ್ದ ಮು.ಮಾ–1 ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. 1, 5, 6 ಮತ್ತು 7ನೇ ಆರೋಪಿಗಳು ನ್ಯಾಯಾಲಯದ ಎದುರು ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿರುತ್ತದೆ. ನ್ಯಾಯಾಲಯದಲ್ಲಿ ಹಾಜರಿದ್ದ 2 ರಿಂದ 4ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ 14–** ಫ್ರಾಸಾ–7 ಪರಮೇಶ್ವರಾಚಾರಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13–08–2022 ರಂದು ತಾನು ಮನೆಯಲ್ಲಿ ಇದ್ದಾಗ ಶನಿವಾರಸಂತೆ ಪೊಲೀಸರು ತನಗೆ ಫೋನ್ ಮಾಡಿ, ಫ್ರಾಸಾ–4 ರವರ ಮನೆಯ ಬಳಿ ಬರಲು ಹೇಳಿದ ಮೇರೆಗೆ ತಾನು ಅಲ್ಲಿಗೆ ಹೋದಾಗ ಚಾಸಾ–1 ಹಾಗೂ ಫ್ರಾಸಾ–1ಇದ್ದರು. ಚಾಸಾ–1 ಕಾಫಿ ಗಿಡದ ದೊಣ್ಣೆಯನ್ನು ಮನೆಯ ಒಳಗಡೆಯಿಂದ ತಂದು ಅದೆ ದೊಣ್ಣೆಯಿಂದ 5ನೇ ಆರೋಪಿ ಬಸವರಾಜು ತನಗೆ ಹಲ್ಲೆ ಮಾಡಿದ್ದರು ಎಂದು ಹೇಳಿ ಹಾಜರುಪಡಿಸಿದ್ದ ಮೇರೆಗೆ ಪೊಲೀಸರು ಮುಮಾ.1 ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು, ಆ ಸಂದರ್ಭದಲ್ಲಿ ಪೊಲೀಸರು ತನ್ನ ಸಮಕ್ಷಮದಲ್ಲಿ ನಿಪಿ.4ರಂತೆ ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ಮಹಜರನ್ನು ಬರೆದಿದ್ದು, ಆ ಸಂದರ್ಭದಲ್ಲಿ ನಿಪಿ–5ರಂತೆ ಫೋಟೊಗಳನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ** 15– ಫ್ರಾಸಾ–8 ಗಂಗಾಧರ ಎಂ.ಕೆ ರವರು ತನ್ನ ಸಾಕ್ಷ್ಯದಲ್ಲಿ ದಿನಾಂಕ 13–06–2023 ರಂದು ತಾನು ಹಾಗೂ ಚಾಸಾ–10 ರವರು ಹಂಡ್ಲಿಯಲ್ಲಿ ಗಾರೆ ಕೆಲಸ ಮಾಡುತಿದ್ದಾಗ ಶನಿವಾರಸಂತೆ ಪೊಲೀಸರು ತಮ್ಮನ್ನು ಠಾಣೆಗೆ ಕರೆಯಿಸಿದ ಮೇರೆಗೆ ತಾನು ಠಾಣೆಗೆ ಹೋದಾಗ ಅಲ್ಲಿ 1ನೇ ಆರೋಪಿ ಇದ್ದು, 1ನೇ ಆರೋಪಿ ತಮ್ಮ ಸಮಕ್ಷಮದಲ್ಲಿ 25,000/– ರೂಪಾಯಿಗಳನ್ನು ಕಳ್ಳತನ ಮಾಡಿದ ಹಣದಲ್ಲಿ 1,200/– ರೂಪಾಯಿ ಇದ್ದು, ಅದನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ನಾಕಲಗೂಡು ಕಣಗಾಲು ಗ್ರಾಮದ 1ನೇ ಆರೋಪಿಯ ಮನೆಯ ಬಳಿಗೆ ಆತ ತೋರಿಸಿಕೊಟ್ಟಂತೆ ತಾವು ಹೋಗಿ 1ನೇ ಆರೋಪಿ ತನ್ನ ಮನೆಯ ಮಲಗುವ ಕೋಣೆಯಲ್ಲಿ ಇದ್ದ ಬೀರುವಿನಿಂದ 1,200/– ರೂಪಾಯಿಗಳಲ್ಲಿ 500ರ ಎರಡು ನೋಟು ಹಾಗೂ 100 ರ ಎರಡು ನೋಟುಗಳನ್ನು ಹಾಜರುಪಡಿಸಿದ್ದು, ಪೊಲೀಸರು ತಮ್ಮ

ಸಮಕ್ಷಮದಲ್ಲಿ ಅವುಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ.8ರಂತೆ ಮಹಜರ್ ನ್ನು ಬೆಳಿಗ್ಗೆ 11.00 ಗಂಟೆಯಿಂದ 12.00ಗಂಟೆಯವರೆಗೆ ಬರೆದಿದ್ದು, ಆ ಸಂದರ್ಭದಲ್ಲಿ ನಿಪಿ-9 ರಂತೆ 4 ಫೋಟೊಗಳನ್ನು ತೆಗೆಯಲಾಗಿರುತ್ತದೆ ಮತ್ತು ಸದರಿ ಮಹಜರಿನಲ್ಲಿರುವ ನಿಪಿ.8ಎ ತನ್ನ ಸಹಿ ಎಂದು ಗುರುತಿಸಿರುತ್ತಾರೆ ಹಾಗೂ 1ನೇ ಆರೋಪಿ ಹಾಜರುಪಡಿಸಿದ್ದ ಮು.ಮಾ-2 ಹಣವನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ16** – ಫ್ರಾಸಾ-8 ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಆ ಬಳಿಕ ತಾವು ಫ್ರಾಸಾ-4 ರವರ ಮನೆಗೆ ಹೋಗಿ 1ನೇ ಆರೋಪಿ ಸದರಿ ಮನೆಯಿಂದ ಫ್ರಾಸಾ-4 ರವರ ಕಿಸೆಯಿಂದ ಹಣವನ್ನು ದೋಚಿಕೊಂಡು ಹೋಗಿದ್ದೇವೆ ಎಂದು ಹೇಳಿದ ಮೇರೆಗೆ ಪೊಲೀಸರು ಅಲ್ಲಿಯು ಸಹಾ ನಿಪಿ-10 ರಂತೆ ಮಹಜರ್ ತಯಾರಿಸಿದ್ದು, ನಿಪಿ-10(ಎ) ತನ್ನ ಸಹಿ ಎಂದು ಗುರುತಿಸಿದ್ದು, ನಿಪಿ-10 ಮಹಜರ್ ನ ಸಂದರ್ಭದಲ್ಲಿ ನಿಪಿ-11 ರಂತೆ ಎರಡು ಫೋಟೊಗಳನ್ನು ತೆಗೆದಿರುತ್ತಾರೆ. 1ನೇ ಆರೋಪಿ ನ್ಯಾಯಾಲಯದ ಎದುರು ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿರುತ್ತದೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರಃ17** – ಫ್ರಾಸಾ-9 ಸ್ಮಿತಾ ಹೆಚ್.ಪಿ, ಪಿಡಿಓ, ಇವರು ತನ್ನ ಸಾಕ್ಷ್ಯದಲ್ಲಿ ದಿನಾಂಕ 16-08-2022 ರಂದು ಚಾಸಾ-24 ತನಿಖಾಧಿಕಾರಿಯವರು ನಾಕಲಗೂಡು ಗ್ರಾಮದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಮನೆ ಇರುವ ಬಗ್ಗೆ ಹಾಗೂ ಸದರಿ ಮನೆಯಲ್ಲಿ ಯಾರು ವಾಸವಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ನೀಡುವಂತೆ ನಿಪಿ-12 ರಂತಿ ಮನವಿ ಪತ್ರವನ್ನು ನೀಡಿದ ಮೇರೆಗೆ ತಾನು ಸ್ಥಳ ಪರಿಶೀಲನೆ ಮಾಡಿದಾಗ ಸ್ಥಳದಲ್ಲಿ ಮನೆ ಇರುತ್ತದೆ ಆದರೆ ಗ್ರಾಮ ಪಂಚಾಯ್ತಿ ಕಛೇರಿಯ, ಡಿ.ಸಿ.ಬಿ ವಹಿ ಪರಿಶೀಲಿಸಿ ನೋಡಲಾಗಿ ಅದರಲ್ಲಿ ಸದರಿ ಮನೆಯ ಬಗ್ಗೆ ನಮೂದಾಗಿರುವುದಿಲ್ಲವೆಂದು ತಾನು ದಿನಾಂಕ 05-09-2022 ರಂದು ತನಿಖಾಧಿಕಾರಿಗೆ ನಿಪಿ-13 ರಂತೆ ಮಾಹಿತಿಯನ್ನು ನೀಡಿದ್ದು, ನಿಪಿ-13(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉಃ ಸುಳ್ಳು.

**ಪ್ರ:18 –** ಫ್ರಾಸಾ–10 ಮನುಕುಮಾರ್, ಕಂದಾಯ ಪರಿವೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ–24 ರವರು ನಾಕಲಗೂಡು ಗ್ರಾಮದಲ್ಲಿರುವ ಸದರಿ ಪ್ರಕರಣದ ತಕರಾರಲ್ಲಿರುವ ಜಾಗ ಯಾರಿಗೆ ಸೇರಿದೆ ಎಂಬ ಬಗ್ಗೆ ದೃಢೀಕರಣ ನೀಡಬೇಕಾಗಿ ಮತ್ತು ಸದರಿ ಜಾಗದ RTC ಯನ್ನು ನೀಡಬೇಕಾಗಿ ತನಗೆ ನಿಪಿ–14 ರಂತೆ ಮನವಿ ಪತ್ರವನ್ನು ನೀಡಿದ್ದು, ತಾನು ದಿನಾಂಕ 13–08–2022 ರಂದು ಸ್ಥಳಕ್ಕೆ ಹೋಗಿ ದಿಶಾಂಕ್ ಆ್ಯಪ್ ಮೂಲಕ ನೋಡಲಾಗಿ ಅದು ಸದರಿ ಸ್ಥಳದ ಸರ್ವೆ ನಂಬರ್ 38/1 ಎಂದು ತೋರಿಸುತ್ತಿದ್ದು, ಅದು ಸರ್ಕಾರದ ಹೆಸರಿನಲ್ಲಿ ಇರುತ್ತದೆ. ಸದರಿ ಜಾಗದಲ್ಲಿ ಫ್ರಾಸಾ–5 ರವರು ಒಂದು ಶೀಟ್ ಮನೆ ನಿರ್ಮಿಸಿದ್ದು ಕಂಡು ಬಂತು. ಫ್ರಾಸಾ–5 ರವರು ಸದರಿ ಜಾಗದ ಮಂಜೂರಾತಿ ಕೋರಿ ನಮೂನೆ–57 ರಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಕಡತ ಸಂಖ್ಯೆ ನಂಕಂಪಕೋ/ವತ್ತು(57)75/2018–19 ರಲ್ಲಿ ದಾಖಲಾಗಿರುತ್ತದೆಂಬ ವಿಷಯ ತನಗೆ ದಾಖಲೆಗಳನ್ನು ಪರಿಶೀಲಿಸಿದ ನಂತರ ತಿಳಿದು ಬಂದಿದ್ದು, ಈ ಬಗ್ಗೆ ತಾನು ಚಾಸಾ–24 ರವರಿಗೆ ದಿನಾಂಕ 13–08–2022 ರಂದು ನಿಪಿ–15 ರಂತೆ ವರದಿಯನ್ನು ನೀಡಿರುತ್ತೇನೆ. ನಿಪಿ–**15(ಎ)** ತನ್ನ ಸಹಿ ಆಗಿರುತ್ತೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:19 –** ಫ್ರಾಸಾ–11 ಮೇಧಪ್ಪ ಬಿ.ಜೆ, ಪ್ರಭಾರ ಪಿಡಿಓ, ಹಂಡ್ಲಿ ಗ್ರಾಮ ಪಂಚಾಯ್ತಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01–07–2023 ರಂದು ಚಾಸಾ–24 ರವರು 1ನೇ ಆರೋಪಿಯು ವಾಸವಿರುವ ಮನೆಯ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತೆ ನಿಪಿ–16 ರಂತೆ ನೀಡಿದ ಮನವಿ ಪತ್ರದ ಮೇರೆಗೆ ತಾನು ಮನೆ ಕಂದಾಯ ಪಾವತಿ ರಿಜಿಸ್ಟರ್ ನ್ನು ಪರಿಶೀಲಿಸಿ, 1ನೇ ಆರೋಪಿಯ ತಂದೆಯಾದ ನಾಗಯ್ಯ ತಂದೆ ರಂಗಯ್ಯ ರವರ ಹೆಸರಿನಲ್ಲಿ ಕಣಗಾಲು, ನಾಕಲಗೂಡು ಗ್ರಾಮದಲ್ಲಿ ಮನೆ ಇರುವ ಬಗ್ಗೆ ನಿಪಿ–17 ರಂತೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ನಿಪಿ–17(ಎ) ತನ್ನ ಸಹಿ ಆಗಿರುತ್ತದೆ ಎಂದು ನುದಿಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:20 –** ಫ್ರಾಸಾ–12 ಇಂದುಧರ್, ವೈದ್ಯಾಧಿಕಾರಿ, ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 18–07–2022 ರಂದು ಮಧ್ಯಾಹ್ನ 12–40 ಗಂಟೆಗೆ ಆರೋಗ್ಯ ಕೇಂದ್ರಕ್ಕೆ ಚಾಸಾ–1 ರವರು ಅವರಿಗೆ ಅದೇ ದಿನ ಲಕ್ಷ್ಮಿ ಮತ್ತು ಇತರರು ಕೈ ಮತ್ತು ಮರದ ಕೋಲುಗಳಿಂದ

ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು, ತಾನು ಚಾಸಾ-1 ರವರನ್ನು ಪರೀಕ್ಷಿಸಿದಾಗ 1). ಬಲ ಮೊಣಕೈ ಹಿಂಭಾಗ 3.5 ಸೆಂ.ಮೀ X 2 ಸೆಂ.ಮೀ ತರಚಿದ ಕೆಂಪು ಬಣ್ಣದ ಗಾಯ. 2) ಬೆನ್ನಿನ ಬಲಭಾಗದ ಮೇಲೆ ನೋವು ಕಂಡುಬಂದಿದ್ದು, ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ 1 ಮತ್ತು 2ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂದು ನಿಪಿ-18 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ನಿಪಿ-18(ಎ) ತನ್ನ ಸಹಿ ಆಗಿರುತ್ತದೆ ಎಂದು ಮತ್ತು ಮು.ಮಾ-1 ಮರದ ಕೋಲುವಿನಿಂದ ಹೊಡೆದಲ್ಲಿ ನಿಪಿ-18 ರಲ್ಲಿ ಕಾಣಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ21 –** ಫ್ರಾಸಾ-13 ಗೋವಿಂದರಾಜು, ಪಿಎಸ್‌ಐ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22-07-2022 ರಂದು ಸಮಯ ರಾತ್ರಿ 10.00 ಗಂಟೆಗೆ ಚಾಸಾ-1 ಠಾಣೆಗೆ ಹಾಜರಾಗಿ ನಿಪಿ.19ರಂತೆ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದಮ್ಮೆ ಸಂಖ್ಯೆ 58/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆಂದು, ನಿಪಿ-19(ಎ) ರ ಶರಾ ಮತ್ತು ಸಹಿಯನ್ನು ತನ್ನದೆಂದು ಹಾಗೂ ನಿಪಿ-19 ರಲ್ಲಿರುವ ಎಡಗೈಯ ಹೆಬೆಟ್ಟು ಗುರುತು ಚಾಸಾ-1 ರವರದ್ದು ಆಗಿರುತ್ತದೆ ಎಂದು ಮತ್ತು ಮುಂದಿನ ತನಿಖೆಯ ಬಗ್ಗೆ ಕಡತವನ್ನು ಚಾಸಾ-24 ರವರಿಗೆ ವರ್ಗಾಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ22 –** ಫ್ರಾಸಾ-13 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ-24 ರವರಿಗೆ ವರ್ಗಾವಣೆ ಆದ ಕಾರಣ ದಿನಾಂಕ 13-06-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-24 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿ, ಅದೇ ದಿನ 1ನೇ ಆರೋಪಿಯನ್ನು ಪತ್ತೆಮಾಡಲು ನೇಮಿಸಲಾದ ಚಾಸಾ-20, 21 ಮತ್ತು 22 ರವರು ಬೆಳಗ್ಗೆ 6.30 ಗಂಟೆಗೆ ಶನಿವಾರಸಂತೆ ಹಂಡ್ಲಿ ಗ್ರಾಮದ ಬಸ್ ಸ್ಟಾಂಡ್ ಬಳಿ 1ನೇ ಆರೋಪಿಯನ್ನು ಹಿಡಿದು ತನ್ನ ಮುಂದೆ ಬೆಳಗ್ಗೆ 7.35 ಗಂಟೆಗೆ ಹಾಜರು ಪಡಿಸಿದ ಮೇರೆಗೆ ತಾನು 1ನೇ ಆರೋಪಿಯನ್ನು ದಸ್ತಗಿರಿ ಮಾಡಿ ನಿಪಿ.21ರಂತೆ ಆತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದಿದ್ದು, ಆತಬ ಸದರಿ ಸ್ವ-ಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದಲ್ಲಿ ಹಣವನ್ನು ಇಟ್ಟಿರುವ ಜಾಗವನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ್ದು, 1ನೇ ಆರೋಪಿಯ ನಿಪಿ-21 ರ ಸ್ವ-ಇಚ್ಛಾ ಹೇಳಿಕೆಯ ಸದರಿ

ನಿರ್ದಿಷ್ಟ ಭಾಗವನ್ನು ಗುರುತಿಸಿದ್ದು, ನಿಪಿ-21(ಎ) ತನ್ನ ಸಹಿ ಆಗಿದ್ದು, ನಿಪಿ-21(ಬಿ) ಆರೋಪಿಯ ಸಹಿ ಆಗಿರುತ್ತದೆ ಎಂದು ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:23 –** ಫ್ರಾಸಾ-13 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾನು ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರನ್ನು ಠಾಣೆಗೆ ಬರಮಾಡಿಕೊಂಡು ನಂತರ ಇಲಾಖಾ ಜೀಪಿನಲ್ಲಿ ತಾನು ಸಿಬ್ಬಂದಿಗಳು, ಪಂಚರು 1ನೇ ಆರೋಪಿ ದಾರಿ ತೋರಿಸಿದ ಮೇರೆಗೆ ಕಣಗಾಲು ಗ್ರಾಮದಲ್ಲಿರುವ 1ನೇ ಆರೋಪಿಯ ಮನೆಯ ಬಳಿ ಹೋಗಿದ್ದು, ಆರೋಪಿಯು ಜೀಪಿನಿಂದ ಇಳಿದು ತಾನೇ ಮುಂದಾಗಿ ತಮ್ಮನ್ನು ಆತನ ಮನೆಯ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ಇದ್ದ ಮರದ ಬೀರುವಿನಲ್ಲಿ ಇಟ್ಟಿದ್ದ ರೂ.1,200/- ಗಳನ್ನು ಹಾಜರು ಪಡಿಸಿರುತ್ತಾರೆ. ಫ್ರಾಸಾ-8 ಹಾಗೂ ಚಾಸಾ-10 ರವರ ಸಮಕ್ಷಮ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನಿಪಿ-8 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ ಹಣವನ್ನು ವಶಕ್ಕೆ ಪಡೆದಿದ್ದು, ನಿಪಿ-8(ಬಿ) ತನ್ನ ಸಹಿ ಆಗಿರುತ್ತದೆ ಎಂದದು ಮತ್ತು ನಿಪಿ-8 ರ ಸಮಯದಲ್ಲಿ ನಿಪಿ-9 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:24 –** ಫ್ರಾಸಾ-13 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ 1ನೇ ಆರೋಪಿಯು ತಾನು ಹಣವನ್ನು ತೆಗೆದುಕೊಂಡ ಜಾಗವನ್ನು ತೋರಿಸುವುದಾಗಿ ಹೇಳಿ ತಮ್ಮನ್ನು ನಾಕಲಗೂಡು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ 1ನೇ ಆರೋಪಿಯು ಫ್ರಾಸಾ-4 ವಾಸ ಇರುವ ಮನೆಯನ್ನು ತೋರಿಸಿಕೊಟ್ಟಿದ್ದು, ಫ್ರಾಸಾ-4 ರವರು ಮನೆಯ ಬಾಗಿಲನ್ನು ತೆರೆದ ನಂತರ 1ನೇ ಆರೋಪಿಯು ಸದರಿ ಮನೆಯ ಒಳಗಡೆ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ 1ನೇ ಆರೋಪಿಯ ಫ್ರಾಸಾ-4 ರವರ ಜೇಬಿನಿಂದ ಹಣವನ್ನು ತೆಗೆದುಕೊಂಡ ಸ್ಥಳ ಇದೇ ಎಂದು ತೋರಿಸಿದ ಮೇರೆಗೆ ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರ ಸಮಕ್ಷಮ ಮಧ್ಯಾಹ್ನ 12.15 ಗಂಟೆಯಿಂದ 1.15 ಗಂಟೆಯವರೆಗೆ ನಿಪಿ-10 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ ನಿಪಿ-11 ರಂತೆ ಭಾವಚಿತ್ರ ತೆಗೆಸಿರುತ್ತೇನೆ. ನಿಪಿ-10(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:25 –** ಫ್ರಾಸಾ–13 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ 1ನೇ ಆರೋಪಿಯ ಜೊತೆ ಠಾಣೆಗೆ ಹಿಂತಿರುಗಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಿಬ್ಬಂದಿಯ ಮೂಲಕ ಕಳುಹಿಸಿಕೊಟ್ಟು, 1ನೇ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಯ ಮೂಲಕ ಸಂಬಂಧಿಸಿದ ನ್ಯಾಯಾಲಯಕ್ಕೆ ಹಾಜರು ಪಡಿಸಿದೆನು. ಚಾಸಾ–21 ರವರು ಮಹಜರ್ ಗಳ ಸಮಯದಲ್ಲಿ ಪೊಟೋಗಳನ್ನು ತೆಗೆದಿದ್ದು, ಆ ಬಗ್ಗೆ ಚಾಸಾ–21 ರವರು ನಿಪಿ–22 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಾಲಂ 65(ಬಿ) ಅಡಿ ನೀಡಿದ್ದ ಧೃಡೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ನಿಪಿ–22(ಎ) ತನ್ನ ಸಹಿ ಆಗಿರುತ್ತದೆ. ನಂತರ ಸಾಕ್ಷಿದಾರರಾದ ಚಾಸಾ–9, 10, 20, 21 ಮತ್ತು 22 ರವರ ಹೇಳಿಕೆಗಳನ್ನು ಪಡೆದೆನು ಎಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ:26 –** ಫ್ರಾಸಾ–14 ಎಸ್.ಪರಶಿವಮೂರ್ತಿ, ಪಿ.ಐ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 23–07–2022 ರಂದು ಫ್ರಾಸಾ–13 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯ ಬಗ್ಗೆ ಪರಿಶೀಲನೆ ಮಾಡಿ ಅದೇ ದಿನ ಕೃತ್ಯ ನಡೆದ ಸ್ಥಳವಾದ ನಾಕಲಗೂಡು ಗ್ರಾಮದ ಶನಿವಾರಸಂತೆ ಕಣಗಾಲು ರಸ್ತೆಯ ಪಕ್ಕದಲ್ಲಿ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಮನೆಯ ಮುಂದೆ ಚಾಸಾ–1 ರವರು ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಫ್ರಾಸಾ–2 ಮತ್ತು ಫ್ರಾಸಾ–3 ರವರ ಸಮಕ್ಷಮ ಮಧ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ–1 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ, ಆ ಸಂದರ್ಭ ನಿಪಿ–2 ರಂತೆ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಂಡಿದ್ದೆನು. ನಿಪಿ–1(ಸಿ) ಮತ್ತು ನಿಪಿ–2(ಸಿ) ತನ್ನ ಸಹಿ ಆಗಿದ್ದು, ನಿಪಿ–1 ರ ಸಮಯದಲ್ಲಿ ನಿಪಿ–3 ರಂತೆ ಎರಡು ಫೋಟೊಗಳನ್ನು ತೆಗೆಯಲಾಗಿದ್ದು, ಅದೇ ದಿನ ಫ್ರಾಸಾ–1, ಫ್ರಾಸಾ–2, ಫ್ರಾಸಾ–6 ಮತ್ತು ಚಾಸಾ–18 ರವರ ಹೇಳಿಕೆಗಳನ್ನು ಪಡೆದೆನು. ಫ್ರಾಸಾ–2 ರವರು ನಿಪಿ–6 ರಂತೆ ತನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ:27 –** ಫ್ರಾಸಾ–14 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 05–08–2022 ರಂದು ಸೋಮವಾರಪೇಟೆಯ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಚಾಸಾ–17 ರವರೊಂದಿಗೆ ಚಾಸಾ–1 ರವರನ್ನು ಕಳುಹಿಸಿಕೊಟ್ಟಿದ್ದು, ಸದರಿ ದಿನ ಸದರಿ ನ್ಯಾಯಾಲಯದಲ್ಲಿ ಚಾಸಾ–1 ರವರ ಹೇಳಿಕೆಯನ್ನು ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ದಾಖಲಿಸಿ, ಅದೇ ದಿನ ಚಾಸಾ–17 ರವರು ಠಾಣೆಗೆ ಹಿಂತಿರುಗಿ ನೀಡಿದ ನಿಪಿ–23 ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ದಾಖಲಿಸಿದ ಚಾಸಾ–1 ರವರ ಹೇಳಿಕೆಯ ಪ್ರತಿಯನ್ನು ಪಡೆದು ಕಡತಕ್ಕೆ ಅಳವಡಿಸಿದ್ದು, ಚಾಸಾ–17 ರವರ ಹೇಳಿಕೆಯನ್ನು ಪಡೆದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ:28 –** ಫ್ರಾಸಾ–14 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13–08–2022 ರಂದು ಫ್ರಾಸಾ–10 ರವರು ನಿಪಿ–15 ರಂತೆ ನೀಡಿರುವ ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ–15 ರಲ್ಲಿ ದಿಶಾಂಕ್ ಆ್ಯಪ್ ಮೂಲಕ ನಾಕಲಗೂಡು ಗ್ರಾಮದ ಮುಖ್ಯ ರಸ್ತೆಯ ಪಕ್ಕ ನಿರ್ಮಿಸಿರುವ ಶೀಟ್ ಮನೆಯ ಜಾಗವನ್ನು ಪರಿಶೀಲಿಸಲಾಗಿ ಅದು ಸರ್ವೆ ನಂಬರ್ 38/1 ಎಂದು ತೋರಿಸುತಿದ್ದು, ಸದರಿ ಜಾಗವು ಸರ್ಕಾರದಿಂದ ಹೆಸರಿನಲ್ಲಿ ಇರುತ್ತದೆ ಮತ್ತು ಸದರಿ ಜಾಗದಲ್ಲಿ ಫ್ರಾಸಾ–5 ರವರು ಶೀಟಿನ ಮನೆ ನಿರ್ಮಿಸಿರುತ್ತಾರೆ ಮತ್ತು ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಫ್ರಾಸಾ–5 ರವರು ನಮೂನೆ–57 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ. ನಿಪಿ–15(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ:29 –** ಫ್ರಾಸಾ–14 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅದೇ ದಿನ ಚಾಸಾ–1 ರವರು ಕೃತ್ಯ ನಡೆದ ಸ್ಥಳದ ಮನೆಯ ಬಾಗಿಲನ್ನು ಕಂದಾಯ ಇಲಾಖೆಗೆ ತಿಳಿಸಿ ತೆರೆಸಿರುವುದಾಗಿ ತಿಳಿಸಿದಂತೆ ಕೃತ್ಯ ನಡೆದ ಸ್ಥಳಕ್ಕೆ ತಾನು ಸಿಬ್ಬಂದಿಯ ಜೊತೆ ಹೋಗಿದ್ದು, ಅಲ್ಲಿ ಚಾಸಾ–1 ರವರು ಹಾಜರಿದ್ದು, ತನಗೆ ಹಲ್ಲೆ ಮಾಡಿದ ದೊಣ್ಣೆಯನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ಸ್ಥಳಕ್ಕೆ ಪಂಚರಾದ ಫ್ರಾಸಾ–2 ಮತ್ತು ಫ್ರಾಸಾ–7 ರವರನ್ನು ಬರಮಾಡಿಕೊಂಡು ಅವರಿಗೆ ವಿಚಾರವನ್ನು ತಿಳಿಸಿ ಅವರು ಒಪ್ಪಿದ ನಂತರ ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ನಿಪಿ–4 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ, ಆ ಸಮಯದಲ್ಲಿ ಚಾಸಾ–1 ರವರು ಮನೆಯ ಒಳಗಡೆ ಗೋಡೆಯ ಪಕ್ಕ ಒಣಗಿದ ಕಾಫಿ ಗಿಡದ ದೊಣ್ಣೆಯನ್ನು ತೋರಿಸಿ ಹಾಜರು ಮಾಡಿದ ಮೇರೆಗೆ ಅದನ್ನು ವಶಕ್ಕೆ ಪಡೆದೆನು, ಅದಕ್ಕೆ ತನ್ನ ಮತ್ತು

ಪಂಚರ ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿದ್ದು, ನಿಪಿ–4 ರ ಸಮಯದಲ್ಲಿ ನಿಪಿ–5 ರಂತೆ 4 ಫೋಟೊಗಳನ್ನು ತೆಗೆಯಲಾಗಿತ್ತು. ಅಮಾನತ್ತುಪಡಿಸಿಕೊಂಡ ಮು.ಮಾ–1ನ್ನು ತನಿಖೆ ಮುಗಿಯುವರೆಗೆ ತನ್ನ ವಶದಲ್ಲಿ ಇಟ್ಟುಕೊಳ್ಳುವಂತೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಸ್ವತ್ತುಪಟ್ಟಿಯನ್ನು ಸಲ್ಲಿಸಿದೆನು. ನಂತರ ಪ್ರಾಸಾ–4 ಹಾಗೂ ಪ್ರಾಸಾ–5 ರವರ ಹೇಳಿಕೆಗಳನ್ನು ಪಡೆದೆನು. ಅದೇ ದಿನ ಚಾಸಾ–14 ರವರಿಂದ ಚಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ–18 ರಂತೆ ಪಡೆದೆನು. ನಿಪಿ–18(ಬಿ) ತನ್ನ ಸಹಿ ಆಗಿರುತ್ತದೆ. ಅದೇ ದಿನ 2 ರಿಂದ 7ನೇ ಆರೋಪಿತರು ಈ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಿ ನ್ಯಾಯಾಲಯದ ಆದೇಶದಂತೆ ಜಾಮೀನು ಪಡೆದು ಬಿಡುಗಡೆ ಮಾಡಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ30 –** ಪ್ರಾಸಾ–14 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 14–08–2022 ರಂದು ನಿಪಿ–1 ಮತ್ತು ನಿಪಿ–4 ರ ಮಹಜರ್ ಸಮಯ ಫೋಟೊಗಳನ್ನು ತೆಗೆದ ಬಗ್ಗೆ ಭಾರತೀಯ ಸಾಕ್ಷ್ಯಾಧಿನಿಯಮದ ಕಲಂ 65(ಬಿ) ರಡಿ ನಿಪಿ–24 ರಂತೆ ದೃಢೀಕರಣ ಪತ್ರವನ್ನು ತಾನು ತಯಾರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–24(ಎ) ತನ್ನ ಸಹಿ ಆಗಿರುತ್ತದೆ ಎಂದು ಮತ್ತು ದಿನಾಂಕ 05–09–2022 ರಂದು ಪ್ರಾಸಾ–9 ರವರಿಂದ ಕೃತ್ಯ ನಡೆದ ಸ್ಥಳದಲ್ಲಿ ಮನೆ ಇರುವ ಬಗ್ಗೆ ನೀಡಿದ ನಿಪಿ–13 ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–13(ಬಿ) ತನ್ನ ಸಹಿ ಆಗಿರುತ್ತದೆ ಮತ್ತು ದಿನಾಂಕ 15–09–2022 ರಂದು ಚಾಸಾ–15 ರವರಿಂದ ಕೃತ್ಯ ನಡೆದ ನಿಪಿ–26 ನಕಾಶೆಯನ್ನು ಮತ್ತು ನಿಪಿ–27 ಕವರಿಂಗ್ ಲೆಟರ್ ನ್ನು ಸ್ವೀಕರಿಸಿದೆನು. ನಿಪಿ–27(ಎ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರಃ31 –** ಪ್ರಾಸಾ–14 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 11–07–2023 ರಂದು ಪ್ರಾಸಾ–9 ರವರು 3ನೇ ಆರೋಪಿಯ ಹೆಸರಿನಲ್ಲಿ ಕಣಗಾಲು ಗ್ರಾಮದಲ್ಲಿ ಮನೆ ಇರುವ ಬಗ್ಗೆ ನಿಪಿ–17 ರಂತೆ ನೀಡಿದ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ–17(ಬಿ) ತನ್ನ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉಃ ಸುಳ್ಳು.

**ಪ್ರ:32 –** ಪ್ರಾಸಾ–14 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 12–07–2023 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು. ಈ ಪ್ರಕರಣದ 1 ರಿಂದ 7ನೇ ಆರೋಪಿತರನ್ನು ನೋಡಿದರೆ ತಾನು ಗುರುತಿಸುವುದಾಗಿ ನುಡಿದಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ 1 ರಿಂದ 4 ಮತ್ತು 6 ಮತ್ತು 7ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 5ನೇ ಆರೋಪಿ ನ್ಯಾಯಾಲಯದ ಎದುರು ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ಪರಿಗಣಿಸಲಾಗಿರುತ್ತದೆ. ಇದಕ್ಕೆ ನಿಮ್ಮ ಉತ್ತರ ಏನು?

ಉ: ಸುಳ್ಳು.

**ಪ್ರ:33 –** ನಿನ್ನ ಪರವಾಗಿ ಏನಾದರೂ ಹೇಳುವುದು ಇದೆಯೆ?

ಉ: ಇಲ್ಲ.

**ಪ್ರ:34 –** ನಿನ್ನ ಪರವಾಗಿ ಯಾರನ್ನಾದರೂ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡುವಿಯಾ?

ಉ: ಇಲ್ಲ.

## ಸಿ.ಆರ್.ಪಿ.ಸಿ. ಕಲಂ 281ರಡಿಯಲ್ಲಿ ಧೃಡೀಕರಣ ಪತ್ರ

ಸಾಕ್ಷ್ಯದಲ್ಲಿ ಆರೋಪಿಗಳು ವಿರುದ್ಧ ಕಂಡುಬಂದ ಅಂಶಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಪ್ರಶ್ನೆಗಳ ರೂಪದಲ್ಲಿ ರಚಿಸಿ, ಆರೋಪಿಗಳಿಗೆ ಓದಿ, ತಿಳಿಸಿ ಪ್ರಶ್ನಿಸಿ ಕೇಳಲಾಯಿತು. ಆರೋಪಿಗಳು ಸದರಿ ಪ್ರಶ್ನೆಗಳನ್ನು ತಿಳಿದುಕೊಂಡು ಉತ್ತರಿಸಿರುತ್ತಾನೆ. ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 04–03–2026 ಸಹಿ/–xxx

**(ಸುರೇಂದ್ರ ಜಿ.)**
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು – ಮಡಿಕೇರಿ.